ನನ್ನ ಓದು

# ಮಕ್ಕಳ ಜಗತ್ತಿನೊಳಗೊಂದು ಹಾಯಿದೋಣಿ ಸವಾರಿ!

## ಗೌರಿ

ವಿಶಿಷ್ಟವಾದ ತಾಜಾತನ ಮತ್ತು ಜೀವಂತಿಕೆಯನ್ನು ಸೂಸುವ ಪದ್ಯಗಳನ್ನು ಒಳಗೊಂಡಿರುವ 'ಬಿಸಿಬಿಸಿ ಬಾತು' ರಾಜಶೇಖರ ಕುಕ್ಕುಂದಾ ಅವರ ಐದನೇ ಮಕ್ಕಳ ಕವಿತೆಗಳ ಸಂಕಲನ.

ಎಳೆಯ ಮನಸ್ಸುಗಳು ಭಾಷೆಯನ್ನು ದಕ್ಕಿಸಿಕೊಳ್ಳಲು ಅರ್ಥಕ್ಕಿಂತ ಹೆಚ್ಚಾಗಿ ಧ್ವನಿ-ಲಯಗಳ ಮೊರೆ ಹೋಗುತ್ತಾರೆ. ಅವರ ಜಗತ್ತಿನ ಮುಗ್ಧ ಭಾಷೆ ಬೇರೆಯೇ! ಅದರ ವ್ಯಾಕರಣವೂ ಬೇರೆಯೇ! ಇಂದಿನ ಬಹುತೇಕ ಮಕ್ಕಳ ಪುಸ್ತಕಗಳಲ್ಲಿ ಗೈರು ಹಾಜರಿರುವುದು ಆ 'ಬೇರೆಯದೇ ಆದ' ಭಾಷೆ ಮತ್ತು ವ್ಯಾಕರಣಗಳು. ಮಕ್ಕಳ ಜಗತ್ತಿನ ಭಾಷೆ ಮತ್ತು ವ್ಯಾಕರಣಗಳನ್ನು ಸೂಕ್ಷ್ಮವಾಗಿ ಗಮನಿಸಿ, ಅದನ್ನು ಬರವಣಿಗೆಯಲ್ಲಿ ಹಿಡಿದಿಡುವುದು ಬಹುದೊಡ್ಡ ಸವಾಲು. ಮಕ್ಕಳ ಸಾಹಿತ್ಯ ರಚನೆ ಬರೀ 'ಜವಾಬ್ದಾರಿ' ಅಂತಲೋ, ಮಕ್ಕಳಲ್ಲಿ ನೈತಿಕ ಪ್ರಜ್ಞೆ ಬೆಳೆಸುವ 'ಉಪದೇಶ' ಅಂತಲೋ ತಿಳಿದು ಹೊರಟರೆ ಅವರ ಜಗತ್ತು ಇನ್ನಷ್ಟು ಮತ್ತಷ್ಟು ದೂರವೇ ಉಳಿದುಬಿಡುತ್ತದೆ. ಅಂಥವರು ರಚಿಸುವ ಸಾಹಿತ್ಯವೂ ಮಕ್ಕಳಿಂದ ಅಷ್ಟೇ ದೂರ ಸರಿದು ನಿಲ್ಲುತ್ತದೆ. ದೊಡ್ಡವರ ಕಣ್ಣಿಂದ ನೋಡಿ ರಚಿಸುವ ಬಹುತೇಕ ಮಕ್ಕಳ ಸಾಹಿತ್ಯ ಕೃತಿಗಳಲ್ಲಿ ಢಾಳಾಗಿ ಕಾಣಿಸುವ ಸಮಸ್ಯೆ ಇದು. ಕೆಲವೇ ಕೆಲವರು ಮಾತ್ರ ಈ ಸಮಸ್ಯೆಯನ್ನು ಮೀರಲು ಯತ್ನಿಸುತ್ತಾ, ಭಾಷೆಯ ಹಾಯಿದೋಣಿಯೇರಿ ಮಕ್ಕಳ ಜಗತ್ತಿನೊಳಗೆ ವಿಹರಿಸಲು ಯತ್ನಿಸುತ್ತಿದ್ದಾರೆ.

ಮಕ್ಕಳ ಜಗತ್ತನ್ನು ಸೂಕ್ಷ್ಮವಾಗಿ ಗಮನಿಸುತ್ತಾ, ಅವರ ಭಾಷೆ-ವ್ಯಾಕರಣಗಳನ್ನು ತಮ್ಮದಾಗಿಸಿಕೊಳ್ಳಲು ಯತ್ನಿಸುತ್ತಾ, ಮಗುವಿನ ಕಣ್ಣು, ಕಿವಿಗಳನ್ನು ತಮ್ಮ ಪದ್ಯಗಳಿಗೆ ಒಡಮೂಡಿಸುತ್ತಾ, ತಮ್ಮ ಖುಷಿಗಾಗಿಯೂ ಬರೆಯುತ್ತಿರುವ ಕೆಲವೇ ಕೆಲವು ಲೇಖಕರಲ್ಲಿ ರಾಜಶೇಖರ ಕುಕ್ಕುಂದಾ ಮುಖ್ಯರು. ಅದಕ್ಕೆ 'ಬಿಸಿ ಬಿಸಿ ಬಾತು' ಒಳಗೊಂಡಿರುವ ಒಂದೊಂದು ಅಗುಳುಗಳನ್ನೂ ಉದಾಹರಣೆಯಾಗಿ ನೋಡಬಹುದು.

ಇಲ್ಲಿನ ಯಾವ ಪದ್ಯಗಳನ್ನೂ ನೀವು ಮನಸ್ಸಿನಲ್ಲೇ ಓದಿಕೊಳ್ಳಲು ಸಾಧ್ಯವಿಲ್ಲ. ಓದುತ್ತ ಓದುತ್ತ ಹೋದ ಹಾಗೆ ನಿಮ್ಮ ನಾಲಿಗೆ ಕುಣಿಯತೊಡಗುತ್ತದೆ. ಮನಸ್ಸು ಧಾಟಿ ಹುಡುಕಿಕೊಳ್ಳುತ್ತದೆ. ತಲೆ ತಂತಾನೆಯೇ ಆಡತೊಡಗುತ್ತದೆ. ಮಗುವಿನ ಅಪರಾ ತಪರಾ ಹೆಜ್ಜೆಗಳ ನಡಿಗೆ, ಅದರ ಮುಗ್ಧ ಭಾಷೆ, ಮನಸೊಳಗೆ ರಿಂಗಣಿಸುವ ಪದಕುಣಿತ ಎಲ್ಲವನ್ನೂ ಈ ಪದ್ಯಗಳಲ್ಲಿ ತರಲು ಯತ್ನಿಸಿದ್ದಾರೆ ಕುಕ್ಕುಂದಾ.

ಈ ಸಂಕಲನದ ಪದ್ಯಗಳೆಲ್ಲ ಸೇರಿ ಒಂದು ಜಗತ್ತನ್ನು ಕಟ್ಟಲು ಯತ್ನಿಸುತ್ತಿವೆ. ಆ ಜಗತ್ತು ಮಕ್ಕಳ ಕಣ್ಣಿಗೆ ಕಾಣಿಸದೇ 'ಅನ್ಯ'ವಾದದ್ದಲ್ಲ. ಸುತ್ತಮುತ್ತಲೂ ಕಾಣಸಿಗುವ ಪ್ರಕೃತಿ, ಪ್ರಾಣಿ ಪಕ್ಷಿಗಳು, ಶಾಲೆ, ಚಂದ್ರಮ, ಸೊಳ್ಳೆ, ಊಟ, ಆಟ – ಹೀಗೆ ಅವರು ದಿನನಿತ್ಯ ಕಾಣಿಸುವ ಜಗತ್ತೇ ಆಗಿದೆ. ಅಲ್ಲಿ ತುಂಟತನವಿದೆ; ಚೇಷ್ಟೆಯಿದೆ; ತಿಳಿವಿದೆ; ನಗುವಿದೆ; ಪ್ರಾರ್ಥನೆಯಿದೆ. ಮತ್ತೆ ಇವೆಲ್ಲವೂ ದೊಡ್ಡವರ ಜಗತ್ತಿನ ಭಾರವಿಲ್ಲದೆ, ಉದ್ಯಾನದೊಳಗಿನ ಚಿಟ್ಟೆಗಳ ಹಾಗೆ ಹಗುರವಾಗಿ ಹಾರಾಡಿಕೊಂಡಿವೆ.

ಇಲ್ಲಿನ ಪದ್ಯಗಳಲ್ಲಿ ಮೊದಲ ಓದಿಗೇ ಗಮನ ಸೆಳೆಯುವುದು ಪದಗಳ ಜೊತೆಗೆ ಕವಿ ನಡೆಸುವ ಆಟ. ಆ ಪದಗಳ ಆಟವೇ ಮಕ್ಕಳನ್ನು ಪದ್ಯಪ್ರಪಂಚಕ್ಕೆ ಕೈ